ವಿಚಾರ ಬಂದು ಮೈಮೇಲೆ ಮುಳ್ಳು ಅರಳಿದುವು. ಮುದುಕನ ಉಡುಪಿಗೆ ಕೂಡ ಬೇರೆಯೇ ಅರ್ಥ ಹೊಳೆದು ಅರ್ಧ ಕ್ಷಣದ ಮಟ್ಟಿಗೇ ಆಗಲಿ ಈ ಅನಿರೀಕ್ಷಿತ ಭೇಟಿ ಭಯ ಹುಟ್ಟಿಸಿತು. ಆಮೇಲೆ ಮನೆಯ ಬಾಗಿಲಿಗೆ ಬಂದವನ ಬಗ್ಗೆ ಹೀಗೆ ಯೋಚಿಸುವುದು ಸರಿಯಲ್ಲವೆಂದು ತಿಳಿದವನ ಹಾಗೆ ತನ್ನನ್ನು ಸಾವರಿಸಿಕೊಳ್ಳುತ್ತ 40 ವರ್ಷಗಳಿಂದಲೂ ನೀವು ಹುಡುಕುತ್ತಿದ್ದವನು ಎಂಟ್ಟತ್ತು ವರ್ಷಗಳ ಬಾಲಕ ಹೇಗಾದನು ಎಂದು ಕೇಳಬೇಕೆಂದುಕೊಂಡದ್ದನ್ನು, ಪ್ರತ್ಯಕ್ಷದಲ್ಲಿ– 'ನಮಗೆ ಅರ್ಥವಾಗಲಿಲ್ಲ' ಎಂದು ಚುಟುಕಾಗಿ ಹೇಳಿದ, ಜಮಶೇದ. ದಯಮಾಡಿ ತಿಳಿಸಿ ಹೇಳಿ ಎನ್ನುವ ಧಾಟಿಯಲ್ಲಿ.

ರಾವ್‌ಜೀಭಾಯಿ ಹೇಳಲು ಸಿದ್ಧವಾಗುವಷ್ಟರಲ್ಲಿ ಡೈನಿಂಗ್ ಟೇಬಲ್ ಮಗ್ಗಲಿನ ಅಡುಗೆಯಮನೆಯ ಬಾಗಿಲಲ್ಲಿ ಕಾಣಿಸಿಕೊಂಡ ಧೋಂಡೂಗೆ ಫ್ರೇನಿ ಹೌದು ಎನ್ನುವಂತೆ ಸನ್ನೆ ಮಾಡಿದಳು. ಅದರ ಅರ್ಥವನ್ನು ಗ್ರಹಿಸಿದ ರಾವ್‌ಜೀಭಾಯಿ– 'ನನಗಾಗಿ ಏನೂ ಮಾಡಿಸುವುದು ಬೇಡ. ಇದೇ ಈಗ ಊಟವಾಗಿದೆ. ಇನ್ನೊಂದು ಪೇಲೆ ನೀರು ತರಿಸಿರಿ ಸಾಕು' ಎಂದು ಮುಗುಳ್ನಕ್ಕ ಮುದುಕನ ಚುರುಕುತನಕ್ಕೆ ತಲೆದೂಗುವವಳ ಹಾಗೆ ಕಣ್ಣುಗಳಲ್ಲಿ ಹೊಳಪು ಮಿಂಚಿಸುತ್ತ– 'ಅಂಥ ವಿಶೇಷವೇನೂ ಇಲ್ಲ. ಶ್ಯಾವಿಗೆ ಮಿಠಾಯಿ. ನಾನೇ ಮಾಡಿದ್ದು' ಎಂದಳು. ರಾವ್‌ಜೀಭಾಯಿಗೆ ಮುದುಕಿ ಬಹಳೇ ಸೇರಿದಳು. ಈ ವಯಸ್ಸಿನಲ್ಲೂ ಖುದ್ದು ಮಿಠಾಯಿ ಮಾಡುವ ಉಮೇದಿಯ ಬಗ್ಗೆ ಕೌತುಕವೆನಿಸಿತು. ತನ್ನಷ್ಟೇ ವಯಸ್ಸಿನವಳೇನೋ ಅಥವಾ ತುಸು ಸಣ್ಣವಳೋ. ಇಂಥ ಪ್ರಾಯದಲ್ಲಿ ವಯಸ್ಸನ್ನು ಊಹಿಸುವುದು ಕಷ್ಟ. ಮುದುಕ– ಮುದುಕಿ ತನ್ನ ಕತೆಯನ್ನು ಕೇಳಿಕೊಳ್ಳಲು ಉತ್ಸುಕರಾದದ್ದನ್ನು ಕಂಡೇ ಪುಲಕಿತನಾದ ರಾವ್‌ಜೀಭಾಯಿ ತನ್ನ ಬಾಯಿಂದ ಹೊರಡಲಿರುವ ವರದಿಯ ಬಗ್ಗೆ ಸ್ವತಃ ತಾನೇ ಕುತೂಹಲ ಪಟ್ಟ ಹಾಗಿತ್ತು; ಈಸಾರೆ ಅದು ಯಾವ ರೂಪ ತಾಳುತ್ತದೆಯೋ ಏನೋ– ಯಾರು ಬಲ್ಲರು? ಎಂದುಕೊಂಡವನ ಹಾಗೆ! ರಾವ್‌ಜೀಭಾಯಿ ಈ ವರದಿಯನ್ನು ಈಗಾಗಲೇ ಎಷ್ಟು ಸಾರೆ, ಎಷ್ಟು ಜನರಿಗೆ ಒಪ್ಪಿಸಿದ್ದಾನೋ– ಅವನಿಗೇ ಗೊತ್ತಿಲ್ಲ. ಅವೇ ಅವೇ ವಿವರಗಳು. ಕ್ರಮಕೂಡ ಅದೇ. ಹೇಳುವಾಗ, ಇದಿರು ಕುಳಿತವರ ಕಣ್ಣ ನೋಟದಿಂದಾಗಿಯೋ, ಕುಳಿತುಕೊಂಡ ಜಾಗದ ಬಣ್ಣ ಬೆಳಕುಗಳಿಂದಾಗಿಯೋ, ಸುತ್ತಲಿನ ಸದ್ದುಗದ್ದಲ ತಾಪಮಾನಗಳಿಂದಾಗಿಯೋ ಪ್ರತಿ ಸಾರಿ ಹೊಸತೇ ಒಂದನ್ನು ಹುಟ್ಟಿಸಿ ಹೇಳಹೊರಟಿದ್ದು ಹೊಚ್ಚಹೊಸ ಆಕೃತಿ ಪಡೆಯತೊಡಗಿದಾಗ ಆಶ್ಚರ್ಯವಾಗಿದೆ. ತಾನು ಹುಡುಕುತ್ತಿದ್ದದ್ದು ನಿಜಕ್ಕೂ ಯಾರನ್ನು ಎಂಬುದೇ ಸ್ಪಷ್ಟವಾಗದೇ ಗೊಂದಲಕ್ಕೆ ಬಿದ್ದವನ ಹಾಗೆ. ಕತೆ ಕೊನೆ ಮುಟ್ಟುತ್ತಿರುವಾಗ– 'ನಾನು ಆವಾಗಿನಿಂದಲೂ ಯಾರ ಬಗ್ಗೆ ಮಾತಾಡುತ್ತಾ ಇದ್ದೆ?' ಎಂದು ತನ್ನನ್ನು ಎಲ್ಲಿಲ್ಲದ ಕರುಣೆ ತುಂಬಿದ, ಎವೆಯಿಕ್ಕದ ಕಣ್ಣುಗಳಿಂದ ನೋಡುತ್ತ ಕುಳಿತುಬಿಟ್ಟವರಿಗೆ ಸ್ವತಃ ತಾನೇ ಕೇಳಿದ್ದಾನೆ! 'ನೀವು ಕಳಕೊಂಡ ಮಗನ ಬಗ್ಗೆ ಹೇಳುತ್ತಿದ್ದೀರಿ' ಎಂದು ಕೆಲವರು ನೆನಪು ಮಾಡಿಕೊಟ್ಟರೆ, ಇನ್ನು ಕೆಲವರು 'ಇಂಥ ಪ್ರಸಂಗ ಯಾವ ತಂದೆ ತಾಯಿಗಳಿಗೂ ಬರಕೂಡದಪ್ಪಾ' ಎಂದು ಹೇಳುವವರ ಹಾಗೆ ಬರಿದೆ ನೋಡುತ್ತ ಸುಮ್ಮಗಾಗುತ್ತಿದ್ದರು.

ಈಗ ಕೂಡ, ತನ್ನ ಕತೆಯನ್ನು ಕೇಳಲು ಉತ್ಸುಕರಾಗಿ ಕುಳಿತಂಥ ಪಾರಸೀ ವೃದ್ಧರಿಗೆ ಅದನ್ನು ಹೇಳಲು ಹೊರಟ ರಾವ್‌ಜೀಬಾಯಿ ಒಮ್ಮಿಂದೊಮ್ಮೆ ಬಾಯಿ ಕಟ್ಟಿದವನ ಹಾಗೆ ಮೌನ ಧರಿಸಿ ಕುಳಿತುಬಿಟ್ಟ. ಪಾರಸೀ ದಂಪತಿ ಹೀಗೇಕಾಯಿತು, ತಾವು ಆಡಬಾರದ್ದನ್ನೇನಾದರೂ ಆಡಿದೆವೆ? ಎಂದುಕೊಂಡು ಪೇಚಾಡುತ್ತಿರುವವರ ಹಾಗೆ ಒಬ್ಬರನ್ನೊಬ್ಬರು ನೋಡುತ್ತಿರುವಾಗ ಅಡುಗೆಯ